ಇ) ಸದರಿ ಜನಾಂಗವನ್ನು ಸರ್ಕಾರದ ಆದೇಶ ಸಂಖ್ಯೆ: ಏಸ್‌ಡಬ್ಲ್ಯೂಡಿ 150 ಬಿಸಿಎ 94, ದಿನಾಂಕ 17.4.94ರ ಜಾತಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳಾದ ಬೆಳ್ಳಿಬೆಳಕು, ಶುಲ್ಕವಿನಾಯಿತಿ ಹೆಚ್ಚುವರಿ ಭೋಜನಾ ನೆಚ್ಚ ವಿದ್ಯಾರ್ಥಿವೇತನ ಮತ್ತು ಮಾಂಗಲ್ಯಭಾಗ್ಯ ಯೋಜನೆಯ ಸೌಲಭ್ಯವನ್ನು ನೀಡಲಾಗುತ್ತಿದೆ.

ಈ) ಸದರಿ ವಿಷಯವು ರಾಜ್ಯದ ಪರ್ಯಾಯ ಜಾತಿ ಪರಿಶೀಲನಾ ಸಮಿತಿಯಲ್ಲಿ ಪರಿಶೀಲನೆಯಲ್ಲಿರುವುದು.

ಉ) ಪ್ರಶ್ನೆ 'ಇ' ಭಾಗದಲ್ಲಿ ನೀಡಿರುವ ಉತ್ತರ ಅನ್ವಯಿಸುವುದು.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಹೊಲಿಗೆ ಕೇಂದ್ರಗಳು.

1987(2469)

ಶ್ರೀ ಶಂಕರಲಿಂಗೇಗೌಡ(ಚಾಮರಾಜ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಹಾಗೂ ನಡೆಯುತ್ತಿದ್ದ ಹೊಲಿಗೆ ಕೇಂದ್ರಗಳು ಯಾವುವು?

ಆ) ಈ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು?

ಇ) ಹೊಲಿಗೆ ಕೇಂದ್ರಗಳನ್ನು ಮುಚ್ಚಲಾಗಿರುವುದೇ ಅಥವಾ ಮುಚ್ಚಲು ತೀರ್ಮಾನಿಸಲಾಗಿದೆಯೇ?

ಈ) ಹಾಗಾದಲ್ಲಿ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದವರ ಭವಿಷ್ಯವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಮೈಸೂರು ಜಿಲ್ಲೆಯಲ್ಲಿ 4 ಹೊಲಿಗೆ ತರಬೇತಿ ಕೇಂದ್ರಗಳು ಹಾಗೂ ಒಂದು ಹೊಲಿಗೆ ಉತ್ಪಾದನಾ ಘಟಕವಿದ್ದು ಸದರಿ ಘಟಕವು ದಿನಾಂಕ 22-6-2001ರಿಂದ ಮುಚ್ಚಲಾಗಿರುತ್ತದೆ. ವಿವರಗಳು ಈ ರೀತಿ ಇರುತ್ತವೆ.

1) ಹೊಲಿಗೆ ತರಬೇತಿ ಕೇಂದ್ರ ಕೆ.ಜಿ.ಕೊಪ್ಪಲ್ ಮೈಸೂರು(ನಗರ)

2) ಹೊಲಿಗೆ ತರಬೇತಿ ಕೇಂದ್ರ ಕೈಲಾಸಪುರ ಮೈಸೂರು (ನಗರ)

3) ಹೊಲಿಗೆ ತರಬೇತಿ ಕೇಂದ್ರ ಟ.ನರಸೀಪುರ ಮೈಸೂರು (ಜಿಲ್ಲೆ)

4) ಹೊಲಿಗೆ ತರಬೇತಿ ಕೇಂದ್ರ ನಂಜನಗೂಡು ಮೈಸೂರು (ಜಿಲ್ಲೆ)

ಆ) ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಈ ಕೆಳಗಿನಂತಿದೆ:

1) ಹೊಲಿಗೆ ತರಬೇತಿ ಕೇಂದ್ರ, ಕೆ.ಜಿ.ಕೊಪ್ಪಲ್ - 1 ಹೊಲಿಗೆ ತರಬೇತಿ ಶಿಕ್ಷಕಿ 1

2) ಹೊಲಿಗೆ ತರಬೇತಿ ಕೇಂದ್ರ, ಕೈಲಾಸಪುರ - 1 ಹೊಲಿಗೆ ತರಬೇತಿ ಶಿಕ್ಷಕಿ

3) ಹೊಲಿಗೆ ತರಬೇತಿ ಕೇಂದ್ರ, ಟ.ನರಸೀಪುರ-1 ಹೊಲಿಗೆ ತರಬೇತಿ ಶಿಕ್ಷಕಿ

4) ಹೊಲಿಗೆ ತರಬೇತಿ ಕೇಂದ್ರ, ನಂಜನಗೂಡು - 1ಹೊಲಿಗೆ ತರಬೇತಿ ಶಿಕ್ಷಕಿ

ಹೊಲಿಗೆ ಉತ್ಪಾದನಾ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ ಈ ಕೆಳಗಿನಂತಿದೆ:

ಅ) ಲೆಕ್ಕಿಗರು	-	1	ಇಲಾಖೆಯ ಖಾಯಂ ನೌಕರರು
ಆ) ತರಬೇತಿ ಶಿಕ್ಷಕಿ	-	1	ಇಲಾಖೆಯ ಖಾಯಂ ನೌಕರರು
3) ಬಟ್ಟೆ ಕತ್ತರಿಸುವವರು	-	1	ಇಲಾಖೆಯ ಖಾಯಂ ನೌಕರರು
4) ಸಹಾಯಕರ ಕಟ್ಟರ್	-	1	ಇಲಾಖೆಯ ಖಾಯಂ ನೌಕರರು
5) ಗ್ರೂಪ್ 'ಡಿ'	-	2	ಇಲಾಖೆಯ ಖಾಯಂ ನೌಕರರು
6) ಬಟ್ಟೆ ಹೊಲಿಯುವ ಕೆಲಸಗಾರರು	-	60	ಇಲಾಖೆಯ ಖಾಯಂ ನೌಕರರು

ಇ) ಜಿಲ್ಲೆಯಲ್ಲಿ ನಡೆಯುತ್ತಿರುವ ಹೊಲಿಗೆ ತರಬೇತಿ ಕೇಂದ್ರಗಳನ್ನು ಮುಚ್ಚಿರುವುದಿಲ್ಲ. ಅವುಗಳು ಈಗಲೂ ನಡೆಯುತ್ತಿವೆ. ಹೊಲಿಗೆ ಉತ್ಪಾದನಾ ಘಟಕವನ್ನು ದಿನಾಂಕ 22-6-2001 ರಿಂದ ಮುಚ್ಚಲಾಗಿದೆ.

ಈ) ಈ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಖಾಯಂ ನೌಕರರನ್ನು ಖಾಲಿ ಇರುವ ಬೇರೆ ಸ್ಥಳಗಳಿಗೆ ತೈನಾತಿಸಲಾಗಿದೆ. ಕನಿಷ್ಟ ವೇತನದ ಆಧಾರದ ಮೇಲೆ ಕೆಲಸ

ಮಾಡುತ್ತಿದ್ದ ದರ್ಜಿಗಳನ್ನು ಬಿಡುಗಡೆ ಮಾಡಿ ಅವರಿಗೆ ಕೈಗಾರಿಕಾ ಏವಾದಗಳ ಕಾಯ್ದೆ ಅನ್ವಯ ಆರ್ಥಿಕ ಪರಿಹಾರವನ್ನು ನೀಡಲಾಗುತ್ತಿದೆ. ಇದಲ್ಲದೆ ಈ ಮಹಿಳೆಯರಿಗೆ ಜೀವನೋಪಾಯ ಕಲ್ಪಿಸುವ ಸಲುವಾಗಿ ಪುನರ್‌ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸರ್ಕಾರ ಪರಿಶೀಲಿಸುತ್ತಿದೆ.

ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಂದಾಯ ಪರಿಷ್ಕರಣೆ.

1988(2470)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕಂದಾಯ ನಿವೇಶನ ಹಾಗೂ ಕಟ್ಟಡಗಳೆಷ್ಟು?

ಆ) ಇತ್ತೀಚಿನ ''ಸ್ವಯಂ ಆಸ್ತಿ ಘೋಷಣೆ'' ಯೋಜನೆಯಡಿ ಕಂದಾಯ ಪರಿಷ್ಕರಣೆಗೆ ಒಪ್ಪಿ ಕಂದಾಯ ಪಾವತಿಸಿರುವವರ ಸಂಖ್ಯೆ ಎಷ್ಟು?

ಇ) ಇತ್ತೀಚಿನ ಕಂದಾಯ ಪರಿಷ್ಕರಣೆ ವಿರೋಧಿಸಿ ಬಂದ ಅರ್ಜಿಗಳೆಷ್ಟು? ಈ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ಕಟ್ಟಡಗಳು 1,03,266

ನಿವೇಶನಗಳು 13,719

ಆ) ಮೈಸೂರು ನಗರ ಪಾಲಿಕೆಯು ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಜಾರಿಗೆ ತಂದಿರುವುದಿಲ್ಲ. ಆದರೆ ಆಸ್ತಿ ತೆರಿಗೆ ಪರಿಷ್ಕರಣೆಯನ್ನು ಮಾತ್ರ ಅಳವಡಿಸಿಕೊಳ್ಳಲಾಗಿದೆ. 29,193 ಜನರು ಪರಿಷ್ಕೃತ ತೆರಿಗೆ ಪಾವತಿ ಮಾಡಿರುತ್ತಾರೆ.

ಇ) ಸ್ವೀಕರಿಸಿರುವ ಆಕ್ಷೇಪಣೆಗಳು 17,375. ಇದರಲ್ಲಿ 6132 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.